ಸವಿತಾ ನಾಗಭೂಷಣ
ಕಲೆ: ಎಸ್.ವಿ. ಹೂಗಾರ್

ಒಳಗನು ಬೆಳಗಿದ ಸಾವಿರಾರು ನದಿಗಳು

ಬಹುಶಃ 1985ರಲ್ಲಿ ಎಂದು ತೋರುತ್ತದೆ, ಮೊದಲ ಬಾರಿಗೆ ನಾನು 'ಸಾವಿರಾರು ನದಿಗಳು' ಕವನವನ್ನು ಓದಿದ್ದು. ಅಹಾ, ಹೆಸರೇ ಎಷ್ಟು ಚಂದ ಅನಿಸಿತ್ತು. ನಾಗಭೂಷಣ ಸಂಗ್ರಹದಲ್ಲಿ ಅದು ಇತ್ತು. 'ತುಂಬಾ ಒಳ್ಳೆಯ ಕವನ, ತುಂಬಾ ಒಳ್ಳೆಯ ಸ್ನೇಹಿತ' ಎಂದು ನಂತರದ ದಿನಗಳಲ್ಲಿ ಸಿದ್ಧಲಿಂಗಯ್ಯ ಅವರನ್ನು ನನಗೆ ಪರಿಚಯಿಸಿದ್ದರು. ಅದಾಗಲೇ ಕುವೆಂಪು ಅವರ 'ಕರಿಸಿದ್ಧ', ಪುತಿನ ಅವರ 'ಕಣಿವೆಯ ಮುದುಕ', ಲಂಕೇಶ್ ಅವರ 'ಅವ್ವ', ಚಂಪಾ ಅವರ 'ಹೂವು ಹೆಣ್ಣು ತಾರೆ' ಓದಿ ನನ್ನಲ್ಲಿ ಒಂದು ಮನೋಭೂಮಿಕೆ ಸಿದ್ಧವಾಗಿತ್ತು. 'ಸಾವಿರಾರು ನದಿಗಳನ್ನು ಸ್ವಾಗತಿಸಲು ಅದು ಸಿದ್ಧವಾಗಿತ್ತು. ಅಷ್ಟೇ ಅಲ್ಲ, ಮ್ಯಾಕ್ಸಿಂ ಗಾರ್ಕಿ ಅವರ 'ಮದರ್' ಕಾದಂಬರಿಯ ಓದು, ಶಿವರಾಮ ಕಾರಂತರ 'ಚೋಮನ ದುಡಿ' ನನ್ನ ಮನಸ್ಸಿನಲ್ಲಿ ಹಸಿಹಸಿ ಆಗಿರುವಾಗಲೇ ಈ ಕವನ ನನ್ನ ಕೈಗೆ ಸಿಕ್ಕಿತ್ತು. ಸಿಕ್ಕಿತ್ತು ಎನ್ನುವುದಕ್ಕಿಂತ ಎದೆಗೆ ಲಗ್ಗೆ ಇಟ್ಟಿತ್ತು ಎಂದೇ ಹೇಳಬಹುದು.

ನೆಲಕಚ್ಚಿರುವ ಮನುಷ್ಯ ಬೆಟ್ಟದಂತೆ ಚಲಿಸುವುದು, ಸಿಂಹಾಸನಗಳು ನೀರಿನಲ್ಲಿ ಮುಳುಗುವುದು. ಬೇಡಿ ತೊಟ್ಟ ಕೈಗಳು ಬಿರುಗಾಳಿಯಲ್ಲಿ ಕೈ ಬೀಸುವುದು, ವೇದ, ಶಾಸ್ತ್ರ, ಪುರಾಣಗಳು ತರಗೆಲೆಯಂತೆ ನೀರಲ್ಲಿ ಕೊಚ್ಚಿ ಹೋಗುವುದು, ಒಂದೇ ಎರಡೇ...?

ಆ ಹೊತ್ತು ನನಗಿದ್ದ ಕ್ರಾಂತಿಯ ಕಲ್ಪನೆ ಎಂದರೆ, 'ತುರ್ತು ಪರಿಸ್ಥಿತಿಯಲ್ಲಿ' ಅದ್ಯಾವುದೋ ಮಾಯಕದಲ್ಲಿ ಮನೆ ಬಾಗಿಲಿನಲ್ಲಿ ಬಂದು ಬೀಳುತ್ತಿದ್ದ ಕರಪತ್ರಗಳು. ಮನೆ, ನನ್ನೂರಿನಲ್ಲಿ ರೈತರು ಚಳವಳಿ ಮಾಡುತ್ತ ಬೀಸುತ್ತಿದ್ದ ಹಸುರು ಶಾಲುಗಳು. ನಾನು ಕಂಡಿಲ್ಲದ, ಕಾಣಬಯಸಿದ ಕ್ರಾಂತಿಯ ವಿಶ್ವರೂಪ ದರ್ಶನವನ್ನು ಈ ಕವನ ನನಗೆ ಮೂಡಿಸಿತು ಎಂದಷ್ಟೇ ಹೇಳಬಲ್ಲೆ. ಸಿದ್ಧಲಿಂಗಯ್ಯ ಅವರು ಬಹುಶಃ ಅವರ 25ನೇ ವಯಸ್ಸಿನಲ್ಲಿ ಈ ಕವನ ಬರೆದಿರಬಹುದು. ನಾನು ಓದಿದಾಗ ನನಗೂ ಅದೇ ವಯಸ್ಸು, ಅದೇ ಕನಸು. ಹಾಗೆ ಅದು ನನ್ನನ್ನು ತೀವ್ರವಾಗಿ ತಟ್ಟಿರಬಹುದು.

'ಕಪ್ಪು ಮುಖ ಬೆಳ್ಳಿ ಗಡ್ಡ'
ಉರಿಯುತಿರುವ ಕಣ್ಣುಗಳು...'

'ಇರುಳಿನಂತಹ ಮೊಗ, ಚಂದಿರನೇ ಗಡ್ಡ, ನಕ್ಷತ್ರಗಳೇ ಮಿನುಗುವ ಕಣ್ಣುಗಳು...' ಹೀಗೆ ಓದಿಕೊಂಡು, 'ಅಲ್ಲಿ ಉರಿ ಇರಬಾರದಿತ್ತು ಕಣ್ರೀ'